ಓ.ಎಸ್. ನಂ. 120/2023 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 14.3.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಕೆ.ಎ ವಕೀಲರಿಂದಃ**

11 ನೇ ಪ್ರತಿವಾದಿ ನನ್ನ ತಮ್ಮನಾಗಬೇಕು. ದಾವಆಸ್ತಿಯನ್ನು ಹೊರತುಪಡಿಸಿ ನಾನು ಬೇರೆಯಾಗಿ ಜಂಟಿ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಸಾಮಾನ್ಯವಾಗಿ ಆಸ್ತಿ ಖರೀದಿ ಮಾಡುವಾಗ ಯಾವ ದಾಖಲೆಯನ್ನು ಪರಿಶೀಲಿಸಬೇಕೆಂಬ ಮಾಹಿತಿ ಇರುತ್ತದೆ. ನಾನು ದಾವಆಸ್ತಿಯನ್ನು ಖರೀದಿ ಮಾಡಿದಾಗ ಮಾರಾಟ ಮಾಡಿದವರ ಹೆಸರಿನಲ್ಲಿದ್ದ ಕ್ರಯಪತ್ರವನ್ನು ನೋಡಿರುತ್ತೇನೆ. ನಾನು ಹಳೆಯ ಕ್ರಯಪತ್ರವನ್ನು ಸಹ ನೋಡಿರುತ್ತೇನೆ. ನಾನು ಆಸ್ತಿಯ ಮೂಲ ದಾಖಲೆಯಿಂದ ಹಿಡಿದು ನಾನು ಖರೀದಿ ಮಾಡುವವರೆಗಿನ ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ದಾವಆಸ್ತಿಯು ಹೆಚ್.ಎನ್.ನಾಗಶೆಟ್ಟಿರವರ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಾಗಿರುತ್ತದೆ. ನಾಗಶೆಟ್ಟಿ ತೀರಿಕೊಂಡ ನಂತರ 1 ರಿಂದ 3 ನೇ ಪ್ರತಿವಾದಿಯರು ದಾವಆಸ್ತಿಯನ್ನು 5 ರಿಂದ 9 ನೇ ಪ್ರತಿವಾದಿಯರ ತಂದೆ ನಜೀರ್ ಅಹ್ಮದ್ ರವರಿಗೆ ಮಾರಾಟ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ನಾಗಶೆಟ್ಟಿ ರವರು ಬದುಕಿದ್ದಾಗ ಅವರ ಕುಟುಂಬದ ನಡುವೆ ಬೇರೆ ಯಾವುದೇ ದಾಖಲೆಯಾಗಿರುವುದನ್ನು ನೋಡಿರುವುದಿಲ್ಲ. ನಾಗಶೆಟ್ಟಿ ರವರಿಗೆ 1 ರಿಂದ 3 ನೇ ಪ್ರತಿವಾದಿಯರನ್ನು ಹೊರತುಪಡಿಸಿ ಬೇರೆ ವಾರಸುದಾರರು ಇರುವ ಬಗ್ಗೆ ಪರಿಶೀಲನೆ ಮಾಡಿರುತ್ತೇನೆ. ಕ್ರಯಪತ್ರದಲ್ಲಿ ಬರೆದಿರುವ ಒಕ್ಕಣೆಯ ಆಧಾರದ ಮೇಲೆ 1 ರಿಂದ 3 ನೇ ಪ್ರತಿವಾದಿಯರು ಮಾತ್ರ ವಾರಸುದಾರರು ಎಂದು ತಿಳಿದುಕೊಂಡಿರುತ್ತೇನೆ. ಕ್ರಯಪತ್ರದ ಒಕ್ಕಣೆಯನ್ನು ಹೊರತುಪಡಿಸಿ ವಾರಸುದಾರರ ಬಗ್ಗೆ ಬೇರೆ ದಾಖಲೆಯನ್ನು ನೋಡಿರುವುದಿಲ್ಲ. ನಾನು 1 ರಿಂದ 3 ನೇ ಪ್ರತಿವಾದಿಯರ ಊರಿಗೆ ಹೋಗಿ ವಾರಸುದಾರರ ಬಗ್ಗೆ ಅಕ್ಕಪಕ್ಕದ ಜಮೀನಿನವರ ಬಳಿ ವಿಚಾರಣೆ ಮಾಡಿರುತ್ತೇನೆ. ಯಾರನ್ನು ವಿಚಾರಣೆ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ಕ್ರಯಪತ್ರಕ್ಕೆ ಸಾಕ್ಷಿದಾರರಾಗಿರುವ ಸಿಂಗಯ್ಯನವರನ್ನು ವಿಚಾರಣೆ ಮಾಡಿರುತ್ತೇನೆ. ಅವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ಮಾಡಿಸಲು ತೊಂದರೆ ಇರುವುದಿಲ್ಲ. ನಾನು ಆ ರೀತಿ ಯಾರನ್ನು ವಿಚಾರಣೆ ಮಾಡಿರುವುದಿಲ್ಲ, ವಿಚಾರಣೆ ಮಾಡಿದ್ದರೆ 1 ರಿಂದ 3 ನೇ ವಾದಿಯರು ನಾಗಶೆಟ್ಟಿರವರ ವಾರಸುದಾರರು ಎಂದು ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ನನಗೆ ಮತ್ತು ನಜೇರ್ ಅಹ್ಮದ್ ರವರಿಗೆ ವಾದಿಯರು ನಾಗಶೆಟ್ಟಿರವರ ವಾರಸುದಾರರು ಎಂದು ತಿಳಿದಿದ್ದರೂ ಸಹ ಅವರಿಗೆ ಮೋಸ ಮಾಡಲು ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರ ಗಮನಕ್ಕೆ ಬಾರದಂತೆ ಕ್ರಯಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿಯರು ಈ ದಾವೆಗೆ ಸಲ್ಲಿಸಿರುವ ತಕರಾರನ್ನು ನೋಡಿರುತ್ತೇನೆ. ಸಾಕ್ಷಿದಾರರು ನಂತರ ಮುಂದುವರಿದು ಅವರು ಹಾಕಿರುವ ತಕರಾರಿನ ಬಗ್ಗೆ ತಿಳಿದುಕೊಂಡಿರುವುದಿಲ್ಲ ಎನ್ನುವರು. ನನ್ನ ತಕರಾರಿನಲ್ಲಿ 1 ರಿಂದ 3 ನೇ ವಾದಿಯರು ನಾಗಶೆಟ್ಟಿರವರ ವಾರಸುದಾರರಲ್ಲದ ಕಾರಣ ಮತ್ತು ಅವರು ಇತರ ಆಸ್ತಿಯಲ್ಲಿ ಪಾಲು ಕೇಳಿರುವುದನ್ನು ನಮೂದಿಸದಿರುವುದರಿಂದ ಅವರಿಗೆ ಪಾಲು ಇಲ್ಲ ಎಂದು ಹೇಳಿರುತ್ತೇನೆ. ವಾದಿಯರು ನಾಗಶೆಟ್ಟಿರವರ ವಾರಸುದಾರರಾಗಿದ್ದರೆ ಅವರಿಗೆ ದಾವಆಸ್ತಿಯಲ್ಲಿ ಪಾಲು ನೀಡಲು ತೊಂದರೆ ಇರುತ್ತದಾ ಎಂದರೆ ಸಾಕ್ಷಿದಾರರು ನಾನು ಕಾನೂನುಬದ್ಧವಾಗಿ ಖರೀದಿ ಮಾಡಿದ್ದು ಪಾಲು ನೀಡುವುದಿಲ್ಲ ಎನ್ನುವರು. ನಾಗಶೆಟ್ಟಿರವರಿಗೆ ಬೇರೆ ಆಸ್ತಿ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಆಸ್ತಿಯನ್ನು ಹೊರತುಪಡಿಸಿ ನಾಗಶೆಟ್ಟಿರವರಿಗೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವರು. ನಾನು ನನ್ನ ತಕರಾರಿನಲ್ಲಿ ಹೇಳಿರುವ ಮನೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಮನೆ ಆಗಿರುತ್ತದೆ. ಸದರಿ ಮನೆಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಆ ಕಾರಣ ಅದನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ವಾದಿಯರು ನಾಗಶೆಟ್ಟಿ ರವರ ಮಕ್ಕಳಾಗಿದ್ದರೆ ಅದನ್ನು ಸೇರಿಸಬೇಕಾಗಿತ್ತು ಎನ್ನುವರು. ಸದರಿ ಮನೆಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಸದರಿ ಮನೆಗೂ ಈ ದಾವೆಗೂ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

ನಜೀರ್ ಅಹ್ಮದ್ ತೀರಿಕೊಂಡ ನಂತರ ದಾವಆಸ್ತಿಯ ಖಾತೆಯು 4 ರಿಂದ 9 ನೇ ಪ್ರತಿವಾದಿಯರ ಹೆಸರಿಗೆ ಆಗಿರುತ್ತದೆ. ನನಗೆ ಮಾಡಿಕೊಟ್ಟಿರುವ ಕ್ರಯಪತ್ರದಲ್ಲಿ ನಜೀರ್ ಅಹ್ಮದ್ ರವರ ಎಲ್ಲ ವಾರಸುದಾರರು ಸಹಿ ಮಾಡಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಯರು ವಾದಿಯರನ್ನು ಸೇರಿಸಿ ನಜೀರ್ ಅಹ್ಮದ್ ರವರಿಗೆ ಕ್ರಯಪತ್ರ ಮಾಡಿಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ವಾದಿಯರು ನಾಗಶೆಟ್ಟಿರವರ ವಾರಸುದಾರರಲಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಯಲ್ಲ ವಾದಿಯರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.